ಸಾಕ್ಷಿಯನ್ನು ದಿನಾಂಕಃ 10-04-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀಮತಿ ಎಂ.ಬಿ.ಎಸ್ , ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿ ಸಂಖ್ಯೆ 1(ಎ) ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ನನ್ನ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

ದಿಃ 25–08–2022 ರ ಜಿ.ಪಿ.ಎ ನ್ನು ನಿಪಿ–1 ಎಂದು, ಫಾರಂ ನಂ.7 ರ ದೃಢೀಕೃತ ನಕಲನ್ನು ನಿಪಿ–2 ಎಂದು, ದಿಃ 06–06–1977 ರ ಭೂನ್ಯಾಯ ಮಂಡಳಿಯ ಆದೇಶದ ದೃಢೀಕೃತ ಪ್ರತಿಯನ್ನು ನಿಪಿ–3 ಎಂದು, ಫಾರಂ ನಂ. 10 ರ ದೃಢೀಕೃತ ಪ್ರತಿಯನ್ನು ನಿಪಿ–4 ಎಂದು, ದಿಃ 09–04–1973 ರ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ನಿಪಿ–5 ಎಂದು ಎದುರುದಾರರ ಪರ ವಕೀಲರ ತಕರಾರಿನ ಮೇರೆಗೆ ಗುರುತಿಸಲಾಯಿತು. ಎರಡು ಮರಣ ಪ್ರಮಾಣ ಪತ್ರಗಳ ನೋಟರಿ ಪ್ರತಿಯನ್ನು ಮೂಲ ಪ್ರತಿಯೊಂದಿಗೆ ಹೋಲಿಸಿ ನೋಡಿ, ನಿಪಿ–6 ಮತ್ತು ನಿಪಿ–7 ಎಂದು ಗುರುತಿಸಲಾಯಿತು ಮತ್ತು ಮೂಲ ಪ್ರತಿಯನ್ನು ವಾದಿಗೆ ಹಿಂದಿರುಗಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ(C/C)